ಆ) ಇಲ್ಲ.

ಇ) ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ 92 ಕರಾರು ಆಧಾರಿತ ಕಿರಿಯ ತರಬೇತಿ ಅಧಿಕಾರಿಗಳನ್ನು ಖಾಯಂಗೊಳಿಸುವ ವಿಷಯವು ಸರ್ಕಾರ ಪರಿಶೀಲನೆಯಲ್ಲಿದೆ.

ಈ) ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಉದ್ಯೋಗ ಮತ್ತು ತರಬೇತಿ ಇಲಾಖೆಯ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅತಿಥಿ ಬೋದಕರುಗಳು

3308 (3974) : ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) ಮಾನ್ಯ ಕಾರ್ಮಿಕ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉದ್ಯೋಗ ಮತ್ತು ತರಬೇತಿ ಇಲಾಖೆಯ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅತಿಥಿ ಬೋದಕರುಗಳ ಸಂಖ್ಯೆ ಎಷ್ಟು;

ಆ) ಈ ಅತಿಥಿ ಬೋದಕರುಗಳು ಸುಮಾರು ವರ್ಷಗಳಿಂದ ಸೇವಾ ಭದ್ರತೆಯಿಲ್ಲದೆ ಅತಂತ್ರ ಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದರೆ, ಇವರುಗಳಿಗೆ ನೀಡುತ್ತಿರುತವ ವೇತನ ಎಷ್ಟು;

ಈ) ಈ ಅತಿಥಿ ಬೋಧಕರುಗಳಿಗೆ ಕ್ರೋಢೀಕೃತ ವೇತನವನ್ನು ನೀಡಲಾಗುವುದೆಂದು ಸರ್ಕಾರ ಭರವಸೆ ನೀಡಿರುವುದು ನಿಜವೆ;

ಉ) ಹಾಗಿದ್ದರೆ, ಇವರುಗಳಿಗೆ ಇಲ್ಲಿಯವರೆಗೆ ಕ್ರೋಢೀಕೃತ ವೇತನ ನೀಡದಿರಲು ಕಾರಣವೇನು; ಈ ಕ್ರೋಢೀಕೃತ ವೇತನವನ್ನು ಯಾವ ದಿನಾಂಕದಿಂದ ನೀಡಲಾಗುವುದು?

ಶ್ರೀ ಖಮರುಲ್ ಇಸ್ಲಾಂ (ಕಾರ್ಮಿಕ ಸಚಿವರು)

ಅ) 465

ಆ) ಹೌದು

ಇ) ಗಂಟೆಗೆ 50–00 ರೂಪಾಯಿಗಳ ಸಂಭಾವನೆ ನೀಡಲಾಗುವುದು.

ಈ) ಪರಿಶೀಲನೆಯಲ್ಲಿದೆ.

ಉ) ಪರಿಶೀಲನೆಯಲ್ಲಿದೆ.

ಬ್ರಹ್ಮಾವರಕ್ಕೆ ವಿಶೇಷ ತಹಶೀಲ್ದಾರರ ನೇಮಕ

3309 (3303) : ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999–2000 ನಂತರ ರಾಜ್ಯದಲ್ಲಿ ಎಷ್ಟು ಕಡೆ ಹೆಚ್ಚುವರಿ ತಹಸೀಲ್ದಾರರನ್ನು ನೇಮಕ ಮಾಡಲು ಉದ್ದೇಶಿಸಲಾಗಿತ್ತು;

ಆ) ಇದುವರೆಗೆ ಎಲ್ಲೆಲ್ಲಿ ಹೆಚ್ಚುವರಿ ತಹಸೀಲ್ದಾರರನ್ನು ನೇಮಕ ಮಾಡಲಾಗಿದೆ; ವಿವರ ನೀಡುವುದು;

ಇ) ಬ್ರಹ್ಮಾವರ ಕ್ಷೇತ್ರಕ್ಕೆ ವಿಶೇಷ ತಹಶೀಲ್ದಾರರ ನೇಮಕ ಮಾಡಲಾಗಿದೆಯೇ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು)

ಅ) ರಾಜ್ಯದಲ್ಲಿ ತಾಲ್ಲೂಕುಗಳ ಪುನರ್ವಿಂಗಡಣೆಗಾಗಿ ರಚಿಸಲಾದ ಸಮಿತಿಗಳು ನೀಡಿರುವ

ಶಿಫಾರಸ್ಸುಗಳನ್ನು ಆಧಾರವಾಗಿಟ್ಟುಕೊಂಡು, ಎಲ್ಲೆಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸುವ ಅವಶ್ಯಕತೆ ಇದೆ ಎನ್ನುವುದನ್ನು ಪರಿಶೀಲಿಸಿ ಆದ್ಯತೆಯ ಮೇರೆಗೆ ಕೆಲವು ಸ್ಥಳಗಳಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸಲು ಸರ್ಕಾರ ನಿರ್ಧರಿಸಿತ್ತು.

ಆ) ಇಲ್ಲಿಯವರೆಗೆ ಈ ಕೆಳಕಂಡ 16 ಸ್ಥಳಗಳಲ್ಲಿ ವಿಶೇಷ ತಹಶೀಲ್ದಾರರುಗಳನ್ನು ನೇಮಿಸಿದೆ:

1) ಹನೂರು
2) ಮೂಡಬಿದ್ರೆ
3) ಬೈಂದೂರು
4) ತಾಳಿಕೋಟೆ
5) ಚಿಟಗುಪ್ಪ
6) ನಿಡಗುಂದಿ
7) ಬಬಲೇಶ್ವರ
8) ಲಕ್ಷ್ಮೇಶ್ವರ
9) ಇಳಕಲ್
10) ಗುಳೇದಗುಡ್ಡ
11) ಕಿತ್ತೂರು
12) ಗಜೇಂದ್ರಗಡ
13) ಕುರುಗೋಡು
14) ಮಸ್ಕಿ
15) ಕಡಬ
16) ಚಡಚಣ

ಇ) ಇಲ್ಲ.

ಉಡುಪಿ ಜಿಲ್ಲೆಯಲ್ಲಿ ನೆರೆ ಹಾಗೂ ಅತಿವೃಷ್ಟಿಯಿಂದ ಹಾನಿ

3310 (3304) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ. (ಬ್ರಹ್ಮಾವರ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಉಡುಪಿ ಜಿಲ್ಲೆಯಲ್ಲಿ ಅತಿವೃಷ್ಟಿಯಿಂದಾಗಿ ಸಾಕಷ್ಟು ಹಾನಿ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)

ಅ) ಬಂದಿದೆ.

ಆ) ಪರಿಹಾರ ನೀಡುವ ಸಲುವಾಗಿ ರು. 20.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ನೆರೆಹಾವಳಿ ಹಾಗೂ ಅತಿವೃಷ್ಟಿ ಪರಿಹಾರ

3311 (3305) : ಶ್ರೀ ಜಯಪ್ರಕಾಶ್ ಹೆಗ್ಡೆ ಕೆ: ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?